ಅ) ಹೌದು, ಕೃಷಿಗೆ ಸಂಬಂಧಿಸಿದ ವಿವಿಧ ವಿಷಯಗಳ ಬಗ್ಗೆ ರಾಜ್ಯ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಮಾನ್ಯ ಕೃಷಿ ಸಚಿವರ ಅಧ್ಯಕ್ಷತೆಯಲ್ಲಿ ಪರಿಣಿತರು ಪ್ರಗತಿಪರ ರೈತರು ಹಾಗೂ ಶಾಸಕರನ್ನು ಒಳಗೊಂಡ ಸಮಿತಿಯನ್ನು ಸರ್ಕಾರ ರಚಿಸಿದೆ.

ಇ) ಪ್ರಸಕ್ತ ಸಾಲಿನಲ್ಲಿ ತೆಗೆದುಕೊಂಡಿರುವ ಹತ್ತಿ ಬೀಜೋತ್ಪಾದನೆಯಿಂದ ಬರುವ ಬೀಜಗಳ ಖರೀದಿಸುವ ಬೆಲೆಯನ್ನು ಆಯಾ ಉತ್ಪಾದನಾ ಸಂಸ್ಥೆಗಳೇ ಬೀಜೋತ್ಪಾದನಾ ವೆಚ್ಚ ಮತ್ತು ಹೊರ ರಾಜ್ಯಗಳಲ್ಲಿ ನಿಗಧಿ ಪಡಿಸಿರುವ ಹತ್ತಿ ಬೀಜಗಳ ಬೆಲೆ ಮುಂತಾದವುಗಳನ್ನು ಗಣನೆಗೆ ತೆಗೆದುಕೊಂಡು ನಿರ್ಧರಿಸುತ್ತವೆ.

ಈ) 1990-91ನೇ ಸಾಲಿನಲ್ಲಿ ಉತ್ಪಾದಿಸಿದ ಸಂಕರ ಹತ್ತಿ ಪ್ರಮಾಣಿತ ಬೀಜದ ಖರೀದಿ ದರವನ್ನು ಕರ್ನಾಟಕ ರಾಜ್ಯ ಬೀಜ ನಿಗಮವು ಕ್ವಿಂಟಾಲ್ ಗೆ 13,500 ರೂ.ಗಳೆಂದು ನಿಗಧಿಪಡಿಸಿದೆ.

ಅರಣ್ಯ ಇಲಾಖೆಯವರ ಪ್ಲಾಂಟೇಷನ್ ವೆಚ್ಚ

3488 - ಶ್ರೀ ಎನ್.ಜಿ. ನಾಯ್ಕ (ಮೊಳಕಾಲ್ಮೂರು) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಎಕರೆ ಪ್ರದೇಶದಲ್ಲಿ ಪ್ಲಾಂಟೇಶನ್ ಗಳನ್ನು ಮಾಡಲಾಗಿರುವುದು? (ಜಿಲ್ಲಾವಾರು ವಿವರಗಳು)

ಆ) ಈ ಪ್ಲಾಂಟೆಷನ್ನುಗಳಿಗೆ ರಾಜ್ಯದಲ್ಲಿ ಎಷ್ಟು ಹಣ ಖರ್ಚಾಗಿದೆ ? (ಜಿಲ್ಲಾವಾರು ವಿವರ ಮಾಹಿತಿ ಕೊಡಿ)

ಶ್ರೀ ಇ.ಟಿ. ಶಂಭುನಾಥ್ (ಅರಣ್ಯ ರಾಜ್ಯ ಸಚಿವರು):

ಅ) ರಾಜ್ಯದಲ್ಲಿ 1991-92ರ ಸಾಲಿನಲ್ಲಿ ಆಗಸ್ಟ್ 1991ರವರೆಗೆ 27845.490 ಹೆಕ್ಟೇರ್ ಪ್ರದೇಶದಲ್ಲಿ ಪ್ಲಾಂಟೇಶನ್‌ಗಳನ್ನು ಮಾಡಿರುತ್ತವೆ.

ಜಿಲ್ಲೆಯ ಹೆಸರು	*ಪ್ಲಾಂಟೆಶನ್‌ಗಳ ವಿಸ್ತಾರ (ಹೆಕ್ಟೇರುಗಳಲ್ಲಿ)*
1. ಬೆಂಗಳೂರು ಗ್ರಾಮೀಣ	993.000
2. ಬೆಂಗಳೂರು ನಗರ	294.800
3. ಬೆಳಗಾಂ	1061.500
4. ಬಳ್ಳಾರಿ	887.000
5. ಬೀದರ್	527.000
6. ಬಿಜಾಪುರ್	941.000
7. ಚಿಕ್ಕಮಗಳೂರು	1205.350
8. ಚಿತ್ರದುರ್ಗ	1609.000
9. ದಕ್ಷಿಣ ಕನ್ನಡ	1619.500
10. ಧಾರವಾಡ	2535.500
11. ಗುಲ್ಬರ್ಗಾ	1208.000
12. ಹಾಸನ	865.000
13. ಕೊಡಗು	499.000
14. ಕೋಲಾರ	1455.430

16. ಮೈಸೂರು	1080.250
17. ರಾಯಚೂರು	813.200
18. ಶಿವಮೊಗ್ಗ	2164.500
19. ತುಮಕೂರು	978.750
20. ಉತ್ತರಕನ್ನಡ	6469.710
ಒಟ್ಟು	27845.490

ಆ) ರಾಜ್ಯದಲ್ಲಿ 1991-92ನೇ ಸಾಲಿನಲ್ಲಿ ಆಗಸ್ಟ್ 91ರ ವರೆಗೆ ಪ್ಲಾಂಟೇಷನ್ ಕೆಲಸಗಳಿಗೆ ಈ ಕೆಳಕಂಡಂತೆ ಹಣವನ್ನು ಖರ್ಚು ಮಾಡಿರುತ್ತದೆ.

ಜಿಲ್ಲೆಯ ಹೆಸರು	ಖರ್ಚುಮಾಡಲಾದ ಹಣ ರೂ, (ಲಕ್ಷಗಳಲ್ಲಿ)
1. ಬೆಂಗಳೂರು ಗ್ರಾಮಾಂತರ	9.172
2. ಬೆಂಗಳೂರು ನಗರ	17.266
3. ಬೆಳಗಾಂ ಜಿಲ್ಲೆ	29.939
4. ಬಳ್ಳಾರಿ	27.388
5. ಬೀದರ್	4.987
6. ಬಿಜಾಪುರ	20.661
7. ಚಿಕ್ಕಮಗಳೂರು	24.927
8. ಚಿತ್ರದುರ್ಗ	57.056
9. ಧಾರವಾಡ	6.314
10. ಗುಲ್ಬರ್ಗಾ	34.996
11. ಹಾಸನ	28.627
12. ಕೊಡಗು	15.624
13. ಕೋಲಾರ	20.788
14. ಮಂಡ್ಯ	21.592
15. ಮೈಸೂರು	25.390
16. ರಾಯಚೂರು	19.872
17. ಶಿವಮೊಗ್ಗ	13.545
18. ತುಮಕೂರು	23.800
19. ಉತ್ತರ ಕನ್ನಡ	21.755
ಒಟ್ಟು	430.358

ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ.

3492 - ಶ್ರೀ ಪಿ. ಬಸವರಾಜ್ (ಬಹ್ಮಾವರ) : ಮಾನ್ಯ ಕೃಷಿ ಸಚಿವರು ಆ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಜ್ಯದಲ್ಲಿ ರೈತರು ಮುಖ್ಯವಾಗಿ ಯಾವ ಯಾವ ಬೆಳೆಗಳನ್ನು ಬೆಳೆಯುತ್ತಿದ್ದಾರೆ. (ಶೇಕಡಾವಾರು ಪ್ರಮಾಣದಲ್ಲಿ ತಿಳಿಸುವುದು)

ಆ) ಇವುಗಳಲ್ಲಿ ಯಾವ ಯಾವ ಬೆಳೆಗಳಿಗೆ ರಾಜ್ಯ ಸರ್ಕಾರವು ಬೆಂಬಲ